


ವಿನ್ಯಾಸಕ್ಕಾಗಿ ರಾಜ್ಯಮಟ್ಟದ ಪ್ರಶಸ್ತಿ ಪಡೆದಿರುವ ಸಿಂದೂರ ಚೆಕ್ಸ್ ಸೀರೆಯಲ್ಲಿ ಕನ್ನಡ ಬಾವುಟದ ಬಣ್ಣ ಹಾಗೂ ಕನ್ನಡ ಅಕ್ಷರ.



ಪಟ್ಟೇದಂಚು ಸೀರೆಯಲ್ಲಿ ವಸ್ತ್ರ ವಿನ್ಯಾಸಕಿ ವೃಂದಾ ಶೇಖರ್

# ಪಟ್ಟೇದಂಚು ಸೀರೆಗೆ ಸಿಕ್ತು ಜಿಐ ಮಾನ್ಯತೆ

**ಐದು ಶತಮಾನಗಳಿಗೂ ಹೆಚ್ಚಿನ ಇತಿಹಾಸ ಇರುವ ಪಟ್ಟೇದಂಚಿನ ಸೀರೆ ಇತ್ತೀಚೆಗೆ ಮತ್ತೆ ಫ್ಯಾಷನ್‌ಲೋಕದಲ್ಲಿ ಸದ್ದು ಮಾಡುತ್ತಿದೆ. ಎರಡೂ ಬದಿಯಿಂದ ಉಡಬಹುದಾದ ನೈಸರ್ಗಿಕ ಬಣ್ಣಗಳ, ನೂಲಿನ ಸೀರೆಗಳು ಗಜೇಂದ್ರಗಢದ ನೇಕಾರರ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಇದೀಗ ಜಿಐ ಟ್ಯಾಗ್ ಮಾನ್ಯತೆ ದೊರೆತಿದ್ದು, ಈ ಸೀರೆಗಳ ಹೆಗ್ಗಳಿಕೆ.**

**■ ಮಂಜುಶ್ರೀ ಎಂ. ಕಡಕೋಳ**

ಸೀರೆ ಎಂಥದ್ದೇ ಇರಲಿ ಅದಕ್ಕೊಂದು ಚಂದನೆಯ ಬಾರ್ಡರ್ ಇದ್ದರೆ ಅದರ ಅಂದ ದುಪ್ಪಟ್ಟಾಗುತ್ತದೆ. ಅಂಥ ಬಾರ್ಡರ್ ಅಥವಾ ಅಂಚಿನ ಕಾರಣಕ್ಕಾಗಿಯೇ ಹೆಂಗಳೆಯರ ಮನಸೆಳೆವ ಸೀರೆಗಳಲ್ಲಿ ಸಾಲಿನಲ್ಲಿ ಮುಂಚೂಣಿಯಲ್ಲಿರುವಂಥದ್ದು ಗಜೇಂದ್ರಗಡದ ಪಟ್ಟೇದಂಚು ಸೀರೆ.

ಹೆಸರಿಗೆ ತಕ್ಕಂತೆ ಪಟ್ಟಿಯ ಅಂಚಿನ (ಬಾರ್ಡರ್) ಕಾರಣಕ್ಕಾಗಿ ಹೆಸರಾಗಿರುವ ಪಟ್ಟೇದಂಚು ಸೀರೆಗೆ ಈಚೆಗಷ್ಟೇ ಭೌಗೋಳಿಕ ಮಾನ್ಯತೆ (ಜಿಐ ಟ್ಯಾಗ್) ದೊರೆತಿರುವುದು ಸೀರೆಯ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಇದರಿಂದ ಗಜೇಂದ್ರಗಡದ ನೇಕಾರರ ಕುಶಲತೆಗೆ ಜಾಗತಿಕ ನೆಲೆಯ ಮಾನ್ಯತೆ ಸಿಕ್ಕಂತಾಗಿದೆ.

ಗಜೇಂದ್ರಗಡ ಸ್ವಾತಂತ್ರ್ಯಪೂರ್ವದಿಂದಲೂ ನೇಕಾರರ ತವರಾಗಿದೆ. ಅದಕ್ಕೆ ಇಂಬುಗೊಡುವಂತೆ ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘವು 1944ರಿಂದ ಇಲ್ಲಿಯ ತನಕ ಇಲ್ಲಿನ ಅಪರೂಪದ ಪಟ್ಟೇದಂಚು ಸೀರೆಯನ್ನು ಜತನವಾಗಿ ಕಾಪಾಡಿಕೊಂಡು ಬರುತ್ತಿದೆ. ಈ ಭಾಗದ